

# ಸುಂದರೀ ನೀನ್ಯಾರು?

ಹುಲ್ಲಿನ ಹಾಸಿನಲಿ
ಕುಳಿತವಳು ನೀನು ಯಾರೇ?
ಚಿಟ್ಟೆಯದಕೆ ಸಡ್ಡು ಹೊಡೆವೆ
ವಯ್ಯಾರಿ ನೀನು ಯಾರೇ?

ಹೂವಿನಂಥ ಉಡುಪು ಧರಿಸಿ
ಹೂವೆಂಬ ಭ್ರಮೆಯ ನೀಡಿ
ಚಿಟ್ಟೆಯನು ಬಳಿಗೆ ಸೆಳೆವೆ
ಸುಂದರಾಂಗಿ ನೀನು ಯಾರೇ?

ಇಳೆಗಿಟ್ಟ ತಿಲಕದಂತೆ
ಕಳೆಯಿಂದ ಮಿಂಚಿ ಬೆಳಗಿ
ನಗುವನ್ನು ಚೆಲ್ಲುತಿರುವೆ
ಅಂದಗಾತಿ ನೀನು ಯಾರೇ?

ಕಲ್ಪನಾ ಲೋಕದಲ್ಲಿ
ಭಾವನೆಗಳ ಹರಿಯಬಿಟ್ಟು
ಹೂನಗೆಯ ಹೂಡಿ ಬಿಡುವೆ
ಕನಸುಗಾತಿ ನೀನು ಯಾರೇ?

ಹೂವ ಬಳಿಗೆ ಚಿಟ್ಟೆಯಂತೆ
ಬಳಿಗೆ ಬಂದ ಎಲ್ಲರನ್ನೂ
ಸೂಜಿಗಲ್ಲಿನಂತೆ ಸೆಳೆವೆ
ಮಾಯಗಾತಿ ನೀನು ಯಾರೇ?

● ಜೆಸ್ಸಿ ಪಿ.ವಿ.

# ಹೂಹುಡುಗಿಯ ಸ್ವಗತ

ಬಣ್ಣದ ಹೂವುಗಳಿವೆ ಇಲ್ಲಿ
ತಣ್ಣನೆಯ ಬೀಸುಗಾಳಿ
ನೆಟ್ಟ ಗಿಡಗಳ ನಡುವೆ
ಚುಚ್ಚುತಿದೆ ಮುಳ್ಳು
ಲಂಟಾನಾ ಕ್ಯಾಕ್ಟಸ್‌ಗಳು

ಕಂಪು ಸೂಸುವ
ರಂಗಿನ ಪಕಳೆಗಳ ಹೂವ
ಬಿಡದೆ ಮುತ್ತಿವೆ ದುಂಬಿಗಳು...
ಮಾಡಿ ಪರಾಗಸ್ಪರ್ಶ
ಹೀರಿದ ಮಕರಂದದ ಬದಲು

ಚಿತ್ತಾರದ ಪಕ್ಕಗಳ ಪಾತರಗಿತ್ತಿ
ಸ್ವಚ್ಛಂದ ಹಾರಬೇಕೆಂದರೆ
ಮೇಲೆರಗಿತು ಯಾವುದೊ ಹಕ್ಕಿ
ಹದ್ದಿನಂತೆಯೆ ಕುಕ್ಕಿ
ರೆಕ್ಕೆ ಬಿಡಿಸುವ ಮೊದಲೆ

ನಗುವ ಹೂವಾಗಲಿಲ್ಲ
ಚಿಟ್ಟೆಯಾಗಿ ಹಾರಾಡಲಿಲ್ಲ
ನಾ ಈಗಲೂ ಬಲ್ಲೆ
ಬದುಕಿ ಬಾಳುವ ಕಲೆ
ಹೆಣ್ಣಾಗಿ ಹುಟ್ಟಿದ ಮೇಲೆ

● ರಾಮಚಂದ್ರ ಪೈ